**1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,**

**ಟಿ.ನರಸೀಪುರ**

**ದಿನಾಂಕ 10 ನೇ ಡಿಸೆಂಬರ್ 2025**

**ಸಿಸಿ ಸಂಖ್ಯೆ 463/2024**

ಫಿರ್ಯಾದಿಃ : ರಾಜ್ಯದ ಪರವಾಗಿ  ತಲಕಾಡು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ಫರಾನ್,
ಬಿನ್ ಜಬೀ ಉಲ್ಲಾ,
ವಯಸ್ಸು 22 ವರ್ಷದ
ವಾಸಃ 7 ನೇ ಅಡ್ಡ ರಸ್ತೆ, ನೂರ್ ಮೊಹಲ್ಲಾ, ಕೊಳ್ಳೆಗಾಲ ಟೌನ್,
ಚಾಮರಾಜನಗರ.

2. ಬಾಬು ಃಉಃ ಮುಹೀಬ್ ಉಲ್ಲಾ ಶರೀಫ್,
ಬಿನ್ ಅಬ್ದುಲ್ ಗಫರ್ ಶರೀಫ್,
ವಯಸ್ಸು 46 ವರ್ಷ,
ವಾಸಃ ನಂ.479, ಪೈಪ್ ಲೈನ್ ರೋಡ್,
ಮುಸ್ಲಿಂಸ್ಟ್ರೀಟ್, ನಾಗವಲ್ಲಿ, ಚಾಮರಾಜನಗರ.

**ದೋಷಾರೋಪಣೆ**

ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.

ಮೊದಲನೆಯದಾಗಿ, ದಿಃ 03/12/2022 ರಂದು ರಾತ್ರಿ 9.45 ಗಂಟೆ ಸಮಯದಲ್ಲಿ, ಬಾತ್ಮೀದಾರರ ಮಾಹಿತಿ ಮೇರೆಗೆ ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಕೊಳ್ಳೇಗಾಲ–ಟಿ.ನರಸೀಪುರ ಮುಖ್ಯ ರಸ್ತೆಯಲ್ಲಿ ಕಲಿಯೂರು–ಮಾದಾಪುರ ನಡುವೆ ತೊಟ್ಟವಾಡಿ ಗೇಟ್ ನ ಬಳಿ ಚಾಸಾ.2 ಮತ್ತು 3 ರವರು ರಸ್ತೆಗಾವಲು ನಡೆಸುತ್ತಿದ್ದಾಗ, 1 ನೇ ಆರೋಪಿಯಾದ ನೀವು 2 ನೇ ಆರೋಪಿಗೆ ಸೇರಿದ ಕೆಎ–40–4383 ನಂಬರಿನ ಗೂಡ್ಸ್ ವಾಹನದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಸಾರ್ಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ–2016 ಕಲಂ.18 ನ್ನು ಉಲ್ಲಂಘನೆ ಮಾಡಿ, ಯಾವುದೇ ರಹದಾರಿ ಇಲ್ಲದೆ ಅಕ್ರಮವಾಗಿ 1.31.208/ ರೂ ಬೆಲೆ ಬಾಳುವ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ 142 ಪ್ಲಾಸ್ಟಿಕ್ ಚೀಲಗಳಲ್ಲಿ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದು, ಆ ಮೂಲಕ ಆರೋಪಿತರಾದ ನೀವು ಅಗತ್ಯ ಸರಕುಗಳ ಕಾಯ್ದೆ–1955 ಕಲಂ 5, 7, 3, 6(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

ಪ್ರಶ್ನೆಃ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

(ಈ ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**